ಅಳುಕಿತ್ತು. ಆದರೆ ಸಿನಿಮಾ ಪೂರ್ವತಯಾರಿಗಾಗಿ ಸುಜಯ್ ಅವರು ಏರ್ಪಡಿಸಿದ್ದ ವರ್ಕ್‌ಷಾಪ್‌ಗೆ ಬಂದ ಮೊದಲ ದಿನವೇ ಆ ಅಳುಕು ಕಳೆಯಿತು. ತುಂಬ ಸರಳವಾದ, ಎಲ್ಲವನ್ನೂ ಕುತೂಹಲದಿಂದ ನೋಡುವ, ಕಲಿಯುವ ವ್ಯಕ್ತಿ ಅವರು. ಸುಮ್ಮನೆ ಹೀರೊಯಿಸಮ್ ಬೆನ್ನು ಬೀಳದೆ ಉತ್ತಮ ಕಥೆಗಳನ್ನು ಆಯ್ದುಕೊಂಡಿದ್ದಾರೆ. ಅವರು ತುಂಬ ಎತ್ತರಕ್ಕೆ ಏರುತ್ತಾರೆ' ಎಂಬ ಭವಿಷ್ಯವನ್ನೂ ಅರ್ಚನಾ ನುಡಿಯುತ್ತಾರೆ.

ಸದ್ಯಕ್ಕೆ ಅವರು ತಾವು ಈಗಾಗಲೇ ನಟಿಸಿರುವ ಹಲವು ಸಿನಿಮಾಗಳು ತೆರೆಗೆ ಬರುವುದನ್ನೇ ಕಾಯುತ್ತಿದ್ದಾರೆ. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ', 'ಹೊಂದಿಸಿ ಬರೆಯಿರಿ', 'ಬಯಲುಸೀಮೆ', 'ಶಬರಿ' ಹೀಗೆ ಅವರು ನಟಿಸಿರುವ ಹಲವು ಸಿನಿಮಾಗಳು ಇನ್ನಷ್ಟೇ ಬಿಡುಗಡೆಯಾಗಬೇಕಾಗಿದೆ. ಹೊಸ ಸಿನಿಮಾಗಳಿಗೆ ಇನ್ನೂ ಅವರು ಸಹಿ ಹಾಕಿಲ್ಲ.

'ನಾವು ತಾಳ್ಮೆಯಿಂದ ಕಾದರೆ ನಮಗೆ ಇಷ್ಟವಾಗುವ ಪಾತ್ರಗಳು ಸಿಗುತ್ತವೆ ಎಂಬ ನಂಬಿಕೆ ನನಗಿದೆ. ಹಾಗಾಗಿ ನಾನು ಕಾಯಲು ಸಿದ್ಧಳಿದ್ದೇನೆ. ನನಗಿಷ್ಟವಾಗುವ ಪಾತ್ರ ಸಿಕ್ಕಾಗ ನಟಿಸುತ್ತೇನೆ' ಎನ್ನುವ ಅವರು ಅವರ ನಿರೀಕ್ಷೆಗಳನ್ನೂ ವಿವರಿಸುತ್ತಾರೆ.

“ವೈಯಕ್ತಿಕವಾಗಿ ನನಗೆ 'ಅರಸು' ಸಿನಿಮಾದಲ್ಲಿ ಮೀರಾ ಜಾಸ್ಮಿನ್ ನಿರ್ವಹಿಸಿದಂಥ ಪಾತ್ರ ಮಾಡಬೇಕು ಎಂಬ ಆಸೆ ಇರುತ್ತದೆ. ಅಂಥ ಆಸೆಗಳು ನಾವು ನೋಡಿದ, ಕೇಳಿದ ಸಿನಿಮಾಗಳಿಂದ ಹುಟ್ಟಿಕೊಂಡಂಥವು. ಅದರಾಚೆಗೆ ನಾವು ಯೋಚಿಸುವುದೇ ಇಲ್ಲ. ಒಬ್ಬಳು ಭಿಕ್ಷುಕಿಯ ಪಾತ್ರದಲ್ಲಿ ನಟಿಸಬೇಕು ಎಂದು ನಾನು ಅಂದುಕೊಂಡಿರುವುದೇ ಇಲ್ಲ. ಆ ಪಾತ್ರ ನನಗೆ ಇಷ್ಟವಿಲ್ಲದಿರಬಹುದು. ನಾನು ಆ ಪಾತ್ರದಲ್ಲಿ ಚೆನ್ನಾಗಿ ಕಾಣಿಸುವುದಿಲ್ಲ ಎಂಬ ಅಳುಕಿರಬಹುದು, ಹೀಗೆ ಕಾರಣಗಳು ಹಲವಿರಬಹುದು. ಆದರೆ ಯಾವುದೋ ನಿರ್ದೇಶಕ ಬಂದು ನನ್ನ ಬಳಿ 'ನನ್ನ ಸಿನಿಮಾದಲ್ಲಿ ನೀವು ಕಳ್ಳಿಯ ಪಾತ್ರ ಮಾಡುತ್ತೀರಾ?' ಎಂದು ಕೇಳಿದರೆ ನಾನು ಎಕ್ಸೈಟ್ ಆಗುತ್ತೇನೆ. ಯಾಕೆಂದರೆ ಅದು ನನ್ನ ಕಲ್ಪನೆಯಲ್ಲಿ ಇಲ್ಲದ ಪಾತ್ರ. ಹಾಗಾಗಿಯೇ ನನಗದು ಒಂದು ಹೊಸ ಸವಾಲು. ಅಂಥ ಸವಾಲುಗಳಿಗೆ ಮುಖಾಮುಖಿ ಆಗುತ್ತಲೇ ನನ್ನ ನಟನೆಯ ಶಕ್ತಿ ಮತ್ತು ಮಿತಿಗಳನ್ನು ಅರಿತುಕೊಳ್ಳಬೇಕು. ಮಿತಿಗಳನ್ನು ತಿದ್ದಿಕೊಳ್ಳಬೇಕು. ನನಗೆ ಹೀರೊಯಿನ್ ಆಗಬೇಕು ಎಂಬ ಆಸೆಯಿಲ್ಲ. ನಟಿಯಾಗಬೇಕು ಎಂಬ ಆಸೆ ಇದೆ' ಎಂದು ಸ್ಪಷ್ಟವಾಗಿ ಹೇಳುವ ಅರ್ಚನಾ, ತಮ್ಮ ನಟನಾಪ್ರತಿಭೆಯನ್ನು ಒರೆಗೆ ಹಚ್ಚುವ ಇನ್ನಷ್ಟು ಪಾತ್ರಗಳನ್ನು ಎದುರು ನೋಡುತ್ತಿದ್ದಾರೆ. ■

# 'ಆಶಿಕಿ'ಯ ಪ್ರೇಮಾಲಾಪ!



ಗಾಂಧಿನಗರದಲ್ಲಿ ಇರುವ ನಿರ್ದೇಶಕಿಯರ ಸಂಖ್ಯೆ ಬೆರಳೆಣಿಕೆಯಷ್ಟೇ. ಜೆ. ಚಂದ್ರಕಲಾ ಕೂಡ ಅವರಲ್ಲೊಬ್ಬರು. ಈ ಹಿಂದೆ 'ಕ್ವಾಟ್ಲೆ' ಸಿನಿಮಾ ಮಾಡಿ ಗಮನಸೆಳೆದಿದ್ದ ಅವರು ಈಗ 'ಆಶಿಕಿ' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಈಗಾಗಲೇ ಚಿತ್ರ ಪೂರ್ಣಗೊಂಡು ಸೆನ್ಸಾರ್ ಅಂಗಳವನ್ನೂ ದಾಟಿ ಬಂದಿದೆ.

ದಸರೆಯ ಹೊತ್ತಲ್ಲಿ ಚಿತ್ರವನ್ನು ಪ್ರೇಕ್ಷಕರ ಎದುರಿನಲ್ಲಿ ಇಡುವುದು ಚಿತ್ರತಂಡದ ಯೋಜನೆ. ಹಾಗಾಗಿಯೇ ಈಗಿನಿಂದಲೇ ಪ್ರಚಾರವನ್ನು ಶುರುಮಾಡಿದೆ. ಅದರ ಮೊದಲ ಹಂತವಾಗಿ 'ಯಾರಾ ಯಾರಾ' ಎಂಬ ಹಾಡಿನ ವಿಡಿಯೊ ಟೀಸರ್ ಕೂಡ ಬಿಡುಗಡೆ ಮಾಡಲಾಗಿತ್ತು. ಈಗ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರ ಎದೆಯಲ್ಲಿ ನಿರೀಕ್ಷಣಾ ಗೆಲುವು ದಾಖಲಿಸಲು ಮುಂದಾಗಿದೆ. ಲಿಯೋ ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಆ. 18ರಂದು ಈ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಲು ತಂಡ ಸಿದ್ಧತೆ ನಡೆಸಿದೆ.

ಈ ಹಿಂದೆ 'ಆಶಿಕಿ' ಎಂಬ ಹೆಸರಿನ ಸಿನಿಮಾವೊಂದು ಬಾಲಿವುಡ್‌ನಲ್ಲಿ ದೊಡ್ಡ ಮಟ್ಟದಲ್ಲಿ ಹಿಟ್ ಆಗಿತ್ತು. ಅದರ ಹಾಡುಗಳು ಈಗಲೂ ಹರೆಯದ ಹುಡುಗರ ಪ್ಲೇಲಿಸ್ಟ್‌ನಲ್ಲಿ ಸ್ಥಾನಪಡೆದಿವೆ. ಈ ಕನ್ನಡದ 'ಆಶಿಕಿ' ಕೂಡ ಒಂದು ಮ್ಯೂಸಿಕಲ್ ಲವ್‌ಸ್ಟೋರಿಯಂತೆ. ಜೊತೆಗೆ ತ್ರಿಕೋನ ಪ್ರೇಮಕಥೆಯ ಆಯಾಮವೂ ಇದಕ್ಕಿದೆ. ಈ ಚಿತ್ರದಲ್ಲಿ ಸಂದೀಪ್ ಕುಮಾರ್ ನಾಯಕನಾಗಿ ನಟಿಸುತ್ತಿದ್ದು ಐಶ್ವರ್ಯಾ ಸಿಂಧೋಗಿ ಮತ್ತು ಪ್ರದೀಪ್ ಕುಮಾರ್ ಮುಖ್ಯಭೂಮಿಕೆಯಲ್ಲಿದ್ದಾರೆ. ■



# ಹೊಂದಿಸಿ ಬರೆದ ಹಾಡು!

ರಾಮೇನಹಳ್ಳಿ ಜಗನ್ನಾಥ್ ನಿರ್ದೇಶನದ 'ಹೊಂದಿಸಿ ಬರೆಯಿರಿ' ಸಿನಿಮಾ ಒಂದಿಲ್ಲೊಂದು ಕಾರಣಕ್ಕೆ ಸುದ್ದಿಯಾಗುತ್ತಲೇ ಇದೆ. ಇತ್ತೀಚೆಗೆ ಬಿಡುಗಡೆಯಾಗಿರುವ ಆ ಸಿನಿಮಾದ ಹಾಡೊಂದು ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಸದ್ದುಮಾಡುತ್ತಿದೆ. ರಾಮೇನಹಳ್ಳಿ ಜಗನ್ನಾಥ್ ಅವರೇ ಸಾಹಿತ್ಯ ಬರೆದಿರುವ ಈ ಹಾಡಿಗೆ ಜೋ ಕೋಸ್ಟ್ ಸಂಗೀತ ಸಂಯೋಜನೆ ಮಾಡಿದ್ದಾರೆ. 'ಗುಳ್ಟು' ಸಿನಿಮಾ ಖ್ಯಾತಿಯ ನವೀನ್ ಮತ್ತು ಅರ್ಚನಾ ಜೋಯಿಸ್ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಏಳು ಯುವಕ–ಯುವತಿಯರ ಬದುಕಿನ ಕಥೆಯನ್ನು ಹೆಣೆದು ಈ ಚಿತ್ರವನ್ನು ಕಟ್ಟಿದ್ದಾರೆ ನಿರ್ದೇಶಕರು. ಈಗಾಗಲೇ ಈ ಚಿತ್ರದ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಮಾಸ್ತಿ, ಪ್ರಶಾಂತ್ ರಾಜಪ್ಪ ಜೊತೆಗೆ ನಿರ್ದೇಶಕರೂ ಸಂಭಾಷಣೆ ಬರೆದಿದ್ದಾರೆ. ಪ್ರವೀಣ್, ಐಶಾನಿ ಶೆಟ್ಟಿ, ಸಂಯುಕ್ತಾ ಹೊರನಾಡು, ಭಾವನಾರಾವ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ■